ಸಹಾಯವನ್ನು ಕೊಡಬೇಕೇ ಹೊರತು ಸಾಗುವಳಿ ಮಾಡದೆ ಇರುವವರಿಗೆ ಜಮೀನು ಕೊಡುವುದಾಗಲೀ ಹಣ ಸಹಾಯ ಮಾಡುವುದಾಗಲೀ ಮಾಡುವುದಿಲ್ಲ. ಸಾಗುವಳಿ ಮಾಡದೆ ಇರತಕ್ಕವರಿಂದ ಜಮೀನನ್ನು ವಾಪಸ್ ತೆಗೆದುಕೊಳ್ಳುವುದರಲ್ಲಿ ಅನುಮಾನವೇ ಇಲ್ಲ. ಇದು ಕಾರ್ಯಗತವಾಗಬೇಕಾದದು ಮುಖ್ಯ.

ಶ್ರೀ ಕಾಗೋಡು ತಿಮ್ಮಪ್ಪ.—ಕಳೆದ 10 ವರ್ಷಗಳಿಂದ ಸಾಗರ್ ತಾಲ್ಲೂಕಿನಲ್ಲಿ ಗೇರು ಸಾಗುವಳಿಗೆ ಕೊಟ್ಟ ಭೂಮಿಯನ್ನು ಅಭಿವೃದ್ಧಿ ಮಾಡದೇ, ಹೇರಳವಾಗಿ ಸಾವಿರಾರು ಎಕರೆ ಭೂಮಿ ಹಾಗೆ ಬಿದ್ದಿದೆ, ಆದುದರಿಂದ ಇದರ ಬಗ್ಗೆ ವಿಶೇಷವಾದಂಥ ತನಿಖೆಯನ್ನು ನಡೆಸಿ ಅಂಥ ಜಮೀನನ್ನು ವಾಪಸ್ಸು ಪಡೆಯುವುದಕ್ಕೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ನಾನು ಆ ಭಾಗದಲ್ಲಿ ವ್ಯವಾಸ ಮಾಡಿದಾಗ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತೆಗೆದುಕೊಂಡು ಬಂದರು. ನಾನು ಕೂಡಲೇ ನಮ್ಮ ಅಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಸಿದ್ದೇನೆ. ಯಾರು ಯ್ಯಾರು ಶರತ್ತಿನ ಪ್ರಕಾರ ವ್ಯವಸಾಯ ಮಾಡಿಲ್ಲ ಆ ಜಮೀನನ್ನೆಲ್ಲಾ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಕಾರ್ಯಕ್ರಮವನ್ನು ತೆಗೆದುಕೊಳ್ಳುವುಕ್ಕೆ ತಿಳಿಸಿದ್ದೇನೆ. ಅವಶ್ಯವಿದ್ದರೆ ಸರ್ಕ್ಯುಲರ್ ಹೊರಡಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

OWNERSHIP OF LAND GRANTED ON LEASE FOR CASHEW CULTIVATION

191. SRI K.R. SRINIVASULU NAYUDU (Shanthinagar).—

Will the Minister for Revenue be pleased to state :—

(*a*) whether ownership rights are being conferred upon the people who have taken lands for cashewnut cultivation according to the terms of lease conditions ;

(*b*) whether it has come to the notice of Government that conferring of ownership rights to such people are kept pending even though they have fulfilled the conditions stipulated in lease agreement ;

(*c*) if so, the reasons for the same ;

(*d*) whether payment of any amount for getting ownership rights is insisted upon by Government on waste lands which are later developed for cashew cultivation ;

(SRI K. SRINIVASULU NAIDU)

(*e*) the steps the Government is taking to develop cashew cultivation in the State with particular reference to the areas in South Kanara District;

(*f*) whether Government intends to create a Cashew Development Board in the State the like of which exist in the case of Coffee and Silk;

(*g*) whether it has come to the notice of Government that the lending institutions like the co-operative societies, Agricultural Re finance Corporation etc., do not lend money on the security of land which is held on mere lease basis?

SRI N. HUTCHAMASTHY GOWDA.— (Minister for Revenue).

(*a*) ownership rights will be conferred on the lessees if they apply for outright grant of land granted on lease if the conditions are fulfilled and they are agreeable to pay the land value.

(*b*) No such cases

(*c*) Does not arise

(*d*) *Vide* reply to item (*a*) above

(*e*) *Vide* Statement appended

(*f*) No.

(*g*) No.

STATEMENT

The steps taken by Government are :

1. To develop the existing area and to bring additional area under Cashew ;
2. To raise and supply quality cashew seedlings

3. To produce and supply cashew air-layers
4. To popularise package of practices
5. To demonstrate improved practices including application of fertilisers and
6. To popularise adoption of plant-protection measures.

The Physical and Financial targets for the State and South Kanara District fixed for 1973-74 under these items are as under :—

		State		South Kanara District	
		Physical	Financial	Physical	Financial
			Rs. in lakhs		Rs. in lakhs
1	Existing area ...	720 hectares	3	382 Hecs	1.50
	Additional area	2500	2	650	1.25
2	Seedlings	5 lakhs	0.19	0.80 lacs	0.05
3	Cashew air-layers	0.15 lakhs	0.10	0.09 lacs	0.03
4	Package practices	1200 hectares	5.00	400 hecs	2.25
5	Improved practices	24 plots	0.36	74 plots	0.10
6	Adoption of plants protection measures	2067 hectates	0 993	454 hees.	0.40

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು : ನನ್ನ (ಊ) ಪ್ರಶ್ನೆ.... ಕಾಫಿ ಹಾಗೂ ರೇಷ್ಮೆಗಳಿಗೆ ಸಂಬಂಧಿಸಿದಂತೆ ಮಂಡಲಿಗಳನ್ನು ರಚಿಸಿದ ರೀತಿಯಲ್ಲಿಯೇ ಗೇರು ಅಭಿವೃದ್ಧಿ ಮಂಡಲಿಯೊಂದನ್ನು ರಚಿಸಲು ಸರ್ಕಾರದವರು ಉದ್ದೇಶಿಸುವರೆ, ಎನ್ನುವುದಕ್ಕೆ ಉತ್ತರದಲ್ಲಿ 'ಇಲ್ಲ' ಎಂದು ಹೇಳಿದ್ದೀರಿ, ಸ್ವಾಮಿ ಗೇರು ಬೀಜದಿಂದ ಫಾರಿನ್ ಎಕ್ಸ್‌ಚೇಂಜ್ ಬರುವುದಿಲ್ಲವೇ ?

‡ಶ್ರೀ ಎನ್. ಹುಚ್ಚಮಾಸ್ತಿಗೌಡ : ಹೌದು. ಇದು ವಿದೇಶಿ ವಿನಿಮಯ ಗಳಿಸತಕ್ಕಂಥ ಬೆಳೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು : ಆದುದರಿಂದ ಸರ್ಕಾರದವರು ಈಗಲಾದರೂ ವ್ಯವಸ್ಥಿತ ರೀತಿಯಲ್ಲಿ ಮಾರ್ಕೆಟಿಂಗ್ ಫೆಸಿಲಿಟೀಸ್ ದೊರಕುವ ದೃಷ್ಟಿಯಿಂದ ಸಂಸ್ಥಾನದಲ್ಲಿ ಗೇರು ಅಭಿವೃದ್ಧಿ ಮಂಡಲಯನ್ನು ತೆಗೆಯುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಇದರಲ್ಲಿ ಆ ಪ್ರಶ್ನೆ ಹೇಗೆ ಬರುತ್ತದೆ?

ಶ್ರೀ ಎಂ. ಎಸ್. ಕೃಷ್ಣನ್ : ತಾವು ಡೆವಲಪ್‌ಮೆಂಟ್ ಬೋರ್ಡನ್ನು ಮಾಡುವುದಕ್ಕೆ ಏನು ಅನಾನುಕೂಲತೆ ಇದೆ ಎಂಬುದು ಅರ್ಥವಾಗಲಿಲ್ಲ. ನಮ್ಮ ಪಕ್ಕದ ಕೇರಳ ರಾಜ್ಯದಲ್ಲಿ ಇದನ್ನು ಮಾಡಿರುವುದರಿಂದ ಆ ಮೂಲಕ ಈ ಕೈಗಾರಿಕೆ ಬೆಳೆಯುವುದಕ್ಕೆ ಸಾಧ್ಯವಾಗಿದೆ ಮತ್ತು ಅನೇಕ ಜನರಿಗೆ ಉದ್ಯೋಗ ಕೊಡುವುದಕ್ಕೆ ಸಾಧ್ಯವಾಗಿದೆ. ಇದನ್ನು ತಾವು ಏತಕ್ಕೆ ಪರ್ಯಾಲೋಚನೆ ಮಾಡ ಬಾರದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಇಲ್ಲಿಯವರೆಗೆ ಕೊಟ್ಟಿರತಕ್ಕಂಥ ಯೋಜನೆಯ ಪ್ರಕಾರ ಕೊಟ್ಟಿರತಕ್ಕ ಭೂಮಿಯಲ್ಲಿ ವ್ಯವಸಾಯ ಮಾಡತಕ್ಕವರು, ನಮಗೆ ಇದರ ಆವಶ್ಯಕತೆ ಇದೆ, ಹಣಕಾಸಿನ ಸಹಾಯ ಆಗಬೇಕು, ಮತ್ತು ತೊಂದರೆಗಳು ಏನು ಇವೆ ಅವನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಬಂದರೆ, ಇದನ್ನು ಮಾಡುವುದು ಅವಶ್ಯಕ ಎಂದು ಕಂಡುಬಂದರೆ ಮಾಡುವುದರಲ್ಲಿ ಅಭ್ಯಂತರ ವಿಲ್ಲ. ಇಲ್ಲಿಯವರೆಗೆ ಅವಶ್ಯಕತೆ ಕಂಡು ಬಂದಿರಲಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ ; ತಾವು ಅಪ್ಪಣೆ ಕೊಡಿಸಿದಿರಿ, ಗೇರು ಬೀಜದಿಂದ ವಿದೇಶಿ ವಿನಿಮಯ ಬರುತ್ತದೆಂದು, ಅಂದಮೇಲೆ ಅರಣ್ಯ ಇಲಾಖೆಯ ಮಂತ್ರಿಗಳಿಗೆ ಹೇಳಿ ಅವರು ಆವರ ಡಿಪಾರ್ಟ್‌ಮೆಂಟಿನವರಿಗೆ ಹೇಳಿ ಬೇರೆ ಬೇರೆ ಗಿಡಮರಗಳನ್ನು ನೆಡುವುದರ ಬದಲು ಗೇರು ಬೀಜಗಳ ಮರಗಳನ್ನು ನೆಡುವುದಕ್ಕೆ ವ್ಯವಸ್ಥೆ ಮಾಡಲಿಕ್ಕೆ ಸಾಧ್ಯವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಆ ಯೋಜನೆ ಕೂಡ ರಾಜ್ಯಮಟ್ಟದಲ್ಲೂ ಇದೆ, ಕೇಂದ್ರದ ಮಟ್ಟದಲ್ಲೂ ಕೂಡ ಇದೆ. ತೋಟಗಾರಿಕೆ ಇಲಾಖೆಯವರು ಮತ್ತು ಅರಣ್ಯ ಇಲಾಖೆಯವರೂ ಈ ಕೆಲಸವನ್ನು ಮಾಡುತ್ತಿದ್ದಾರೆ. Scheme for development of cashew nuts... Horticulture Department. ತೋಟಗಾರಿಕೆ ಇಲಾಖೆಯಲ್ಲಿ 2000 ಹೆಕ್ಟಾರ್ಸ್ ನಮ್ಮ ಈ ಬೆಳೆ ಮಾಡಬೇಕು ಎಂದು ಯೋಚನೆ ಇದೆ. ಹಣವನ್ನು ಕೂಡ ಒದಗಿಸುತ್ತಿದ್ದೇವೆ. ಒಟ್ಟು ರಾಜ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಬಂಧಪಟ್ಟಹಾಗೆ ಪ್ರತ್ಯೇಕವಾಗಿ 320 ಹೆಕ್ಟಾರ್ಸ್‌ಗಳಲ್ಲಿ ಇದನ್ನು ಮಾಡಬೇಕು ಎಂದು ಇದ್ದೇವೆ. ಅರಣ್ಯ ಇಲಾಖೆಯಲ್ಲಿ 720 ಹೆಕ್ಟಾರ್ಸ್‌ನಲ್ಲಿ ಗೇರು ಬೀಜದ ಗಿಡಗಳನ್ನು ಬೆಳೆಸತಕ್ಕ ವ್ಯವಸ್ಥೆ ಮಾಡಬೇಕೆಂದು ಇದ್ದೇವೆ. ಸೆಂಟ್ರಲ್ ಸೆಕ್ಟಾರ್ಸ್‌ನಲ್ಲಿ 4-5 ಯೋಜನೆಗಳಿವೆ. (1) Scheme for production of air layers.....ಕ್ಯಾಶ್ಯು ಮಾಡ ತಕ್ಕದ್ದು ತೋಟಗಾರಿಕೆಯ ಇಲಾಖೆಯಲ್ಲಿ 15 ಸಾವಿರ ಹೆಕ್ಟಾರ್ಸ್‌ಗಳಲ್ಲಿ ಮಾಡ

ಬೇಕೆಂಬ ಯೋಜನೆ ಇದೆ. ಮತ್ತೆ Secheme for Special package programme .... ಇದಕ್ಕೆ ಫಾರೆಸ್ಟ್ ಡಿಪಾರ್ಟ್‌ಮೆಂಟಿನಿಂದ 1200 ಹೆಕ್ಟಾರ್ ಗಳ ಕಾರ್ಯಕ್ರಮ ಕೈಕೊಳ್ಳಬೇಕು ಎಂದು ಯೋಜನೆ ಇದೆ. Scheme for laying demonstration plots ಇದು ತೋಟಗಾರಿಕೆಯ ಇಲಾಖೆಯಿಂದ 210 ಪ್ಲಾಂಟ್ಸ್ ತೆಗೆದುಕೊಳ್ಳಬೇಕೆಂದು ಇದೆ. Scheme for area expension programmes ಫಾರೆಸ್ಟ್ ಡಿಪಾರ್ಟ್‌ಮೆಂಟಿನಿಂದ 500 ಹೆಕ್ಟಾರ್‌ಗಳಲ್ಲಿ Scheme for development of plant protection measure ಇದಕ್ಕೂ ಸಹ ತೋಟಗಾರಿಕೆಯ ಇಲಾಖೆಯಿಂದ 1367 ಹೆಕ್ಟಾರ್‌ಗಳಲ್ಲಿ ಮತ್ತು ಅರಣ್ಯ ಇಲಾಖೆಯಲ್ಲಿ 700 ಹೆಕ್ಟಾರ್‌ಗಳಲ್ಲಿ. ಈ ಪ್ರಕಾರ ಇಷ್ಟನ್ನು ಕಾರ್ಯಗತ ಮಾಡುವುದಕ್ಕೆ ಯೋಜನೆಗಳು ಇವೆ, ತೋಟಗಾರಿಕೆ ಮತ್ತು ಫಾರೆಸ್ಟ್ ಇಲಾಖೆಯವರು ಅದನ್ನು ಕೈಗೊಳ್ಳುತ್ತಾರೆ.

ಶ್ರೀ ಸಿ. ಬೈರೇಗೌಡ : ಖಾಸಗಿಯವರಿಗೆ ಗೇರು ಬೀಜವನ್ನು ಬೆಳೆಯುವುದಕ್ಕೆ ಭೂಮಿಯನ್ನು ಕೊಡುವುದಕ್ಕೆ ಬದಲಾಗಿ ಅರಣ್ಯ ಇಲಾಖೆಯವರೇ ನಾವಿರಾರು ಎಕರೆ ಅರಣ್ಯವನ್ನು ಬೆಳೆಸುತ್ತಿದ್ದಾರೆ ಅದೇ ರೀತಿಯಲ್ಲಿ ಗೇರು ಬೀಜವನ್ನು ಏತಕ್ಕೆ ಹಾಕಬಾರದು ? ನೀವು ಕೆಲವರಿಗೆ ಜಮೀನನ್ನು ಕೊಟ್ಟಿದ್ದೀರಿ ಆದರೆ ಅವರು ಗೇರುಬೀಜವನ್ನು ಬೆಳೆಯುವುದಕ್ಕೆ ಬದಲಾಗಿ ಅದನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಅವರ ಮೇಲೆ ಏತಕ್ಕೆ ನೀವು ಕ್ರಮ ತೆಗೆದುಕೊಳ್ಳಬಾರದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಅನೇಕರು ಖಾಸಗಿಯವರು ಜಮೀನನ್ನು ತೆಗೆದುಕೊಂಡಿರುವವರು ಕಾರ್ಯಗತ ಮಾಡದೇ ಇರುವುದರಿಂದ, ತೋಟಗಾರಿಕೆ ಇಲಾಖೆಯವರು ಅರಣ್ಯ ಇಲಾಖೆಯವರು ಈ ಎರಡು ಇಲಾಖೆಗಳಿಗೆ ಕೊಡಬೇಕೆಂಬ ತೀರ್ಮಾನ ಮಾಡಿ ಹಣವನ್ನು ಒದಗಿಸಿದ್ದೇವೆಂದು ಸಭೆಗೆ ತಿಳಿಸಿದ್ದೇನೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು ; ಗಂಧದ ಎಣ್ಣೆ ಡಿಸ್ಟ್ಯೈಲ್ ಮಾಡಿದ ಹಾಗೆ ಗೇರುಬೀಜ ಪ್ರೊಸೆಸಿಂಗ್ ಫ್ಯಾಕ್ಟರಿಯನ್ನು ಸರ್ಕಾರ ತೆಗೆಯುವುದಕ್ಕೆ ಯೋಜನೆ ಮಾಡಿದ್ದಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಇದು ನೇರವಾಗಿ ಈ ಪ್ರಶ್ನೆಗೆ ಸಂಬಂಧಪಡುವುದಿಲ್ಲ ಎಂದು ಕಾಣುತ್ತಿದೆ.